# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ. 151/2024**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹೊಳಲ್ಕೆರೆ** ಪೊಲೀಸರು

**– ವಿರುದ್ಧ –**

**ಆರೋಪಿ** – **ರತ್ನಮ್ಮ ಕೋಂ. ಲೇಟ್ ಕುಮಾರ,**
ವಯಸ್ಸು : 38 ವರ್ಷ, ಕೂಲಿ ಕೆಲಸ
ವಾಸ: ದುಮ್ಮಿ ಗ್ರಾಮ, ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ

## –: ದೋಷಾರೋಪಣೆ :–

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ** 2 ನೇ *ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ* ಆದ ನಾನು

ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಿಸುವುದೇನೆಂದರೆಃ–

ದಿನಾಂಕ 19.2.2024 ರಂದು ರಾತ್ರಿ ಸುಮಾರು 11 ಗಂಟೆ ಸಮಯದಲ್ಲಿ ಹೊಳಲ್ಕೆರೆ ಪೋಲಿಸ್ ಠಾಣಾ ವ್ಯಾಪ್ತಿ ದುಮ್ಮಿ ಗ್ರಾಮದಲ್ಲಿ ಮೃತ ರುದ್ರೇಶನು ನಿಮ್ಮ ಮನೆಯ ಬಳಿ ಪೆಟ್ರೋಲ್ ತೆಗೆದುಕೊಂಡು ಹೋಗಿ ನಿಮ್ಮನ್ನು ಕುರಿತು "ನೀನು ನನ್ನ ಜೊತೆ ಮುಂಚೆ ಇದ್ದ ಹಾಗೆ ಹೊಂದಿಕೊಂಡು ಇರಬೇಕು, ಹಾಗೆಯೇ ನಾನು ಸಾಲದ ರೂಪದಲ್ಲಿ ಕೊಡಿಸಿರುವ ಒಂದೂವರೆ ಲಕ್ಷ ರೂ.ಗಳನ್ನು ವಾಪಸ್ ಕೊಡಬೇಕು" ಎಂದು ತಾನು ತೆಗೆದುಕೊಂಡು ಹೋಗಿದ್ದ ಪೆಟ್ರೋಲ್ ತೋರಿಸಿ "ಈ ಪೆಟ್ರೋಲ್ ಹಾಕಿಕೊಂಡು ಬೆಂಕಿ ಹಚ್ಚಿಕೊಂಡು ಸತ್ತು ಹೋಗುತ್ತೇನೆ" ಎಂದಾಗ ಆರೋಪಿತಳಾದ ನೀನು ಹೇಗೆ ಸತ್ತು ಹೋಗುತ್ತಿಯಾ ಹೋಗು ಎಂದವಳೆ ರುದ್ರೇಶನ ಕೈಯಲ್ಲಿದ್ದ ಪೆಟ್ರೋಲನ್ನು ರುದ್ರೇಶನ ಮೇಲೆ ಸುರಿದಿದ್ದು, ರುದ್ರೇಶನು ಬೆಂಕಿ ಕಡ್ಡಿ ಗೀರಿಕೊಂಡಾಗ ಬೆಂಕಿ ಹತ್ತಿಕೊಂಡಿದ್ದು, ಚಾಸಾ:11 ಶಿವಪ್ಪ, ಚಾಶಾ:12 ಮಂಜುನಾಥ ಉಪಚರಿಸಿದ್ದು, ರುದ್ರೇಶನ ಸೊಂಟದ ಮೇಲೆ ದೇಹದ ಭಾಗ ಸುಟ್ಟು ಹೋಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, **ನನ್ನ ಸಂಜ್ಞಾನಕ್ಕೆ ಬರುವ, ಭಾರತೀಯ ದಂಡ ಸಂಹಿತೆ ಕಲಂ 306 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.**

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ

# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ. 151/2024**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹೊಳಲ್ಕೆರೆ** ಪೊಲೀಸರು

**– ವಿರುದ್ಧ –**

**ಆರೋಪಿ** – **ರತ್ನಮ್ಮ ಕೋಂ. ಲೇಟ್ ಕುಮಾರ,**
ವಯಸ್ಸು : 38 ವರ್ಷ, ಕೂಲಿ ಕೆಲಸ
ವಾಸ: ದುಮ್ಮಿ ಗ್ರಾಮ, ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ

**–: ದೋಷಾರೋಪಣೆ :–**

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.